




ಕಾದು 29 ಜೂನ್ 2023ರಂದು, ಕಿವಿ ಮೂಗು ಗಂಟಲು (ಇ.ಎನ್.ಟಿ) ತಜ್ಞರ ಬಳಿಗೆ ಹೋಗಿ ತೋರಿಸಿಕೊಂಡಿದ್ದೆ. ಇ.ಎನ್.ಟಿ. ತಜ್ಞರು ನೀಡಿದ ಗುಳಿಗೆಗಳನ್ನು ತೆಗೆದುಕೊಂಡೆ, ಕಿವಿಗಳು ಸುಧಾರಿಸಿದ್ದವು. ನಾನು ತೆಗೆದುಕೊಂಡ ಆಂಟಿಬಯಾಟಿಕ್‌ಗಳಿಗೆ ಏನಾದರೂ ಇಂತಹ ಅಡ್ಡಪರಿಣಾಮ ಇರಲು ಸಾಧ್ಯವೇ ಯೋಚಿಸಿದೆ. ವೈದ್ಯರಿಬ್ಬರು ನೀಡಿದ ಅಷ್ಟೂ ಗುಳಿಗೆಗಳ ಅಡ್ಡಪರಿಣಾಮಗಳನ್ನು ಪರಿಶೀಲಿಸಿದೆ. ಅತಿ ಸಾಮಾನ್ಯವಾದ ಅಡ್ಡಪರಿಣಾಮಗಳು: ವಾಂತಿ, ಭೇದಿ, ಅಪಚನ, ಮಲಬದ್ಧತೆ, ಸುಸ್ತು, ಸಂಕಟ, ಇಂತಹವು ಮಾತ್ರ ಇದ್ದವು. ಈ ಬಗೆಯಲ್ಲಿ ಮುಟ್ಟು ನಿಂತ ಮಹಿಳೆಯರಲ್ಲಿ ರಕ್ತಸ್ರಾವವಾಗುವಂತಹ ಅಡ್ಡಪರಿಣಾಮ ಅವುಗಳಿಗಿರಲಿಲ್ಲ.

ಈಗ ನನ್ನ ಗಮನ ಮೊದಲ ವೈದ್ಯರು ಕೊಟ್ಟ ಇಂಜೆಕ್ಷನ್ ಕಡೆ ಹರಿಯಿತು. ರಕ್ತಸ್ರಾವ ಆರಂಭವಾದದ್ದು ಇಂಜೆಕ್ಷನ್ ತೆಗೆದುಕೊಂಡ ಎರಡು ವಾರಕ್ಕೆ. ಸಂಬಂಧವಿಲ್ಲ ಅನಿಸಿದರೂ, ತೆಗೆದು ನೋಡಿದೆ, ಆ ಇಂಜೆಕ್ಷನ್ ಕೂಡ ಆಂಟಿಬಯಾಟಿಕ್ ಎಂದೇ ನಾನು ಭಾವಿಸಿದ್ದೆ. ಆದರೆ ಪರಿಶೀಲಿಸಿದಾಗ ಅದು ಸ್ಟೀರಾಯ್ಡ್ ಆಗಿತ್ತು! ಸ್ಟೀರಾಯ್ಡ್ ಎಂದೊಡನೆ ಗಾಬರಿಯಾಗಬೇಕಿಲ್ಲ, ಕೆಲವು ಸಂದರ್ಭಗಳಲ್ಲಿ ಸ್ಟೀರಾಯ್ಡ್ ನೀಡುವುದು ಅಗತ್ಯವಾಗುತ್ತದೆ ಎಂದು ತಿಳಿದಿತ್ತು. ಅಕ್ಕನಿಗೆ ಅಸ್ತಮಾ ತೀವ್ರವಾಗಿ ಬಡಿದಾಗ ಸ್ಟೀರಾಯ್ಡ್ ಇಂಜೆಕ್ಷನ್ ಕೊಡುತ್ತಿದ್ದದ್ದು ತಿಳಿದಿತ್ತು. ಅಮ್ಮನಿಗೆ ಮಂಡಿನೋವು ವಿಪರೀತವಾದಾಗಲೂ, ನೋವು ಶಮನಕ್ಕೆ ಸ್ಟೀರಾಯ್ಡ್ ಇಂಜೆಕ್ಷನ್ ಕೊಡುತ್ತಿದ್ದರು. ಆದರೆ ಸಾಧಾರಣ ಕಿವಿನೋವಿಗೆ, ಒಣಕೆಮ್ಮಿಗೆ ಸ್ಟೀರಾಯ್ಡ್ ಕೊಡುತ್ತಾರೆಯೆ? ನನಗೆ ತಿಳಿದಿರಲಿಲ್ಲ. ಈ ಇಂಜೆಕ್ಷನ್‌ನಲ್ಲಿ ಏನಿದೆ ಎಂದು ನೋಡಿದೆ. ಈ ಇಂಜೆಕ್ಷನ್‌ನಲ್ಲಿ ಇದ್ದದ್ದು 'ಟ್ರಿಅಮ್ಸಿನೊಲೋನ್ ಅಸಿಟೊನೈಡ್'. ಇದು 'ಕಾರ್ಟಿಕೊಸ್ಟೆರಾಯ್ಡ್' ಎಂಬ ಔಷಧಿಯ ಗುಂಪಿಗೆ ಸೇರಿತ್ತು. ಇದನ್ನು ಸಾಮಾನ್ಯವಾಗಿ ಸಂಧಿವಾತದಲ್ಲಿ (ಆರ್ಥರೈಟಿಸ್) ನೋಯುವ, ಬಿಗಿಯಾಗಿ ಹಿಡಿದ, ಉರಿಯೂತದ ಕೀಲುಗಳಿಗೆ ನೋವುಶಮನಕ್ಕೆ ನೀಡಲಾಗುತ್ತದೆ. 'ಟ್ರಿಅಮ್ಸಿನೊಲೋನ್ ಅಸಿಟೊನೈಡ್' ಇದು ಹಲವು ಬ್ರಾಂಡ್‌ನೇಮ್‌ಗಳಲ್ಲಿ ದೊರೆಯುತ್ತದೆ. ಉದಾಹರಣೆಗೆ ಟ್ರೆಂಕಾರ್ಟ್, ಕೆನಾಕಾರ್ಟ್, ಅರ್ಥೋಡೆಪ್, ನಿಯೊಲೋನ್ ಮುಂತಾದವು.

ಈ ಸ್ಟೀರಾಯ್ಡ್ ಇಂಜೆಕ್ಷನ್‌ನ ಅಡ್ಡಪರಿಣಾಮಗಳು ಏನಾದರೂ ಇವೆಯೆ, ಹುಡುಕಿಯೇ ಹುಡುಕಿದೆ. ಫಾರ್ಮಸಿ ವೆಬ್‌ಸೈಟ್‌ಗಳಲ್ಲಿ ಔಷಧಿಗಳ ವಿವರಗಳಿದ್ದವು. 'ಟ್ರಿಅಮ್ಸಿನೊಲೋನ್ ಅಸಿಟೊನೈಡ್' ಔಷಧಿಯ ಒಂದೊಂದೇ ಬ್ರಾಂಡ್‌ನ ವಿವರಗಳನ್ನು ತೆರೆದು ನೋಡಿದೆ. 'ನೋವು, ಸುಸ್ತು, ಸ್ನಾಯು ದೌರ್ಬಲ್ಯ, ಬೆವರುವುದು, ತಲೆನೋವು, ಹೊಟ್ಟೆ ಕೆಡುವುದು, ತಲೆ ತಿರುಗುವುದು', ಹೀಗೆ ಹಲವು ಅಡ್ಡಪರಿಣಾಮಗಳ ಪಟ್ಟಿ ಅಲ್ಲಿತ್ತು.

ಅದರಲ್ಲಿ ಎಲ್ಲಿಯೂ 'ಮುಟ್ಟು ನಿಂತ ಮಹಿಳೆಯರಲ್ಲಿ ರಕ್ತಸ್ರಾವ' ಎಂಬ ಮಾತಿರಲಿಲ್ಲ. ಸಾಮಾನ್ಯವಲ್ಲದ 'ಅನ್‌ಕಾಮನ್' ಅಡ್ಡಪರಿಣಾಮಗಳ ಪಟ್ಟಿಯೂ ಇತ್ತು, 'ಮೂಳೆಗಳು ಮುರಿಯುವುದು, ಕಣ್ಣದೃಷ್ಟಿ ಹಾಳಾಗುವುದು, ಹೊಟ್ಟೆಯಲ್ಲಿ ರಕ್ತಸ್ರಾವ...' ಆ ಎಲ್ಲ ಅಪರೂಪದ ಅಡ್ಡಪರಿಣಾಮಗಳ ಪಟ್ಟಿಯಲ್ಲೂ ಮುಟ್ಟು ನಿಂತ ಮಹಿಳೆಯರಲ್ಲಿ ರಕ್ತಸ್ರಾವ ಎಂಬುದಿರಲಿಲ್ಲ.

ಹುಡುಕಿಯೇ ಹುಡುಕಿದೆ, ಅಗೋ 'ಟ್ರೆಂಕಾರ್ಟ್' ಬ್ರಾಂಡ್ ಒಂದರ 40ಕ್ಕೂ ಹೆಚ್ಚು 'ಸಾಮಾನ್ಯವಲ್ಲದ ಅಡ್ಡಪರಿಣಾಮಗಳ' ಉದ್ದನೆಯ ಪಟ್ಟಿಯಲ್ಲಿ ಕಂಡುಬಂದಿತು, 'ತಿಂಗಳ ಋತುಸ್ರಾವದಲ್ಲಿ ವ್ಯತ್ಯಾಸ' ಮತ್ತು 'ಮುಟ್ಟು ನಿಂತ ಮಹಿಳೆಯರಲ್ಲಿ ರಕ್ತಸ್ರಾವ'!

ದಿಗ್ಭ್ರಮೆಯಾಯಿತು, ಜೊತೆಗೇ ಎದೆಯಲ್ಲಿ ಮೂಡಿತ್ತು ಸಣ್ಣ ಆಶಾಕಿರಣ. ನನ್ನ ನಿಕಟ ಸಂಬಂಧಿಕರು ಮೂಳೆ ವೈದ್ಯರು, ಅವರಲ್ಲಿ 'ಟ್ರಿಅಮ್ಸಿನೊಲೋನ್ ಅಸಿಟೊನೈಡ್ ಸ್ಟೀರಾಯ್ಡ್ ಇಂಜೆಕ್ಷನ್‌ನಿಂದ ಮುಟ್ಟು ನಿಂತ ಮಹಿಳೆಯರಲ್ಲಿ ಇಂತಹ ಅಡ್ಡಪರಿಣಾಮ ಉಂಟೆ?' ಕೇಳಿದೆ. 'ಹಾಗೇನು ಇಲ್ಲ' ಎಂದರು. ಅರೆ ಆರ್ಥೋಪಿಡಿಕ್ ತಜ್ಞರಿಗೆ ತಿಳಿದಿಲ್ಲದ ಅಡ್ಡ ಪರಿಣಾಮ! ಹಾಗಿದ್ದರೆ ಅದು ಬಲು ಅಪರೂಪದ್ದೇ ಇರಬೇಕು ಅಂದುಕೊಂಡೆ.

## ಅಪರೂಪವೆ ಅಡ್ಡಪರಿಣಾಮ?

ಅಂತರ್ಜಾಲದಲ್ಲಿ ಮೆಡಿಕಲ್ ಕೇಸ್ ಸ್ಟಡಿಗಳನ್ನು ಹಾಗೂ ವೈದ್ಯಕೀಯ ಸಂಶೋಧನಾ ಪ್ರಬಂಧಗಳನ್ನು

